OS No.40/2016 PW-**1**

**<u>ದಿನಾಂಕ 13.09.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ ಃ</u>**

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ದಿನಾಂಕ 28.10.2015 ರ ಹಣ ಸಂದ ರಶೀದಿಯನ್ನು ಹಾಜರುಪಡಿಸಿದ್ದು ಅದನುನ ನಿಪಿ-3 ಎಂದು, 3 ನೇ ಪ್ರತಿವಾದಿ ನಿಪಿ-3 ರ ಹಣ ಸಂದ ರಶೀದಿಯಾಗುವ ಸಂದರ್ಭದಲ್ಲಿ ವಿದೇಶದಲ್ಲಿದ್ದು, 1 ನೇ ಪ್ರತಿವಾದಿಗೆ ತನ್ನ ಪರವಾಗಿ ಅಗ್ರಿಮೆಂಟ್ ಗೆ ಸಹಿ ಹಾಕಲು ಮತ್ತು ಹಣ ಪಡೆಯಲು ಪವರ್ ಆಫ್ ಅಟಾರ್ನಿಯನ್ನು ನೀಡಿರುತ್ತಾರೆ ಸದರಿ ಪವರ್ ಆಫ್ ಅಟಾರ್ನಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ದಿಃ24.03.2016 ರ ಪ್ರತಿವಾದಿಯವರು ತಮ್ಮ ವಕೀಲರ ಮುಖಾಂತರ ನೀಡಿದ ನೋಟೀಸ್ ಮತ್ತು ಆರ್ ಪಿ ಎ ಡಿ ಕವರ್ ಅನ್ನು ಹಾಜರುಪಡಿಸಿದ್ದು ನೋಟೀಸ್ ಅನ್ನು ನಿಪಿ-5 ಎಂದು ಆರ್ ಪಿ ಎ ಡಿ ಕವರ್ ಅನ್ನು ನಿಪಿ-5(ಎ) ಎಂದು, ಸದರಿ ನೋಟೀಸ್ ಗೆ ನಮ್ಮ ವಕೀಲರ ಮುಖಾಂತರ ನೀಡಿದ ಉತ್ತರವನ್ನು ಹಾಜರುಪಡಿಸಿರುತ್ತೇನೆ ಸದರಿ ಪ್ರತ್ಯುತ್ತರದಲ್ಲಿಯೇ ಪೋಸ್ಟಲ್ ರಶೀದಿಯನ್ನು ಅಂಟಿಸಲಾಗಿದೆ ಅದನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ದಾವಾ ಸ್ವತ್ತಿಗೆ ಸಂಬಂದಪಟ್ಟ 3 ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ ನಿಪಿ-9 ಎಂದು, ಮಲ್ಲೇಶ್ವರಂ ಪೋಲಿಸ್ ಠಾಣೆಯ ಕ್ರೈಂ ನಂಬರ್ 37/2018 ಕ್ಕೆ ಸಂಬಂದಪಟ್ಟ ಪ್ರಥಮ ವರ್ತಮಾನದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ಶುಭಾ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**